**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.**

---

## ತಾಂತ್ರಿಕ ಟೆಂಡರ್

## ಧ್ವೈವಾರ್ಷಿಕ ದರ ಗುತ್ತಿಗೆ

ಕಹಾಮ ಪಶುಆಹಾರ ಘಟಕ **ಶಿಕಾರಿಪುರ ಕಾರ್ಖಾನೆಯಿಂದ** ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಇದರ ವ್ಯಾಪ್ತಿಯ ಹಾ.ಉ.ಸ.ಸಂಘಗಳು/ಶೀಥಲಿಕರಣ ಕೇಂದ್ರಗಳು/ಬಿ.ಎಂ.ಸಿ ಗಳು/ಮುಖ್ಯ ಡೇರಿ ಉಗ್ರಾಣಗಳಿಗೆ ಮಾಹೆಯಾನ ಸುಮಾರು 5500 ಮೆ.ಟನ್ ಪಶುಆಹಾರ, 30 ಮೆ.ಟನ್ ಖನಿಜ ಮಿಶ್ರಣ, ಕರುಗಳ ಆಹಾರ, ಸಮೃದ್ಧಿ ಪಶುಆಹಾರ ಮತ್ತು ಯು.ಎಂ.ಬಿ. ಗಳನ್ನು ಸರಕು ಸಾಗಾಣಿಕೆ ವಾಹನಗಳಿಂದ ಸಾಗಾಣಿಕೆ ಮಾಡಲು 2008ರ ಅಥವಾ ನಂತರದ ಸಾಲಿನ ಅಂದಾಜು 20 ಮೆ.ಟನ್ ಸಾಮರ್ಥ್ಯದ ಸುಸ್ಥಿತಿಯುಳ್ಳ ಸರಕು ಸಾಗಾಣಿಕೆ ವಾಹನಗಳನ್ನು ಧ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ತಾಂತ್ರಿಕ ಟೆಂಡರ್.

## ತಾಂತ್ರಿಕ ಟೆಂಡರ್ ಭಾಗ—1

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ | 19.12.2022 ರಿಂದ |
| 2 | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ | 18.01.2023 ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಪೂರ್ವಭಾವಿ ಸಭೆ ನಡೆಯುವ ದಿನಾಂಕ ಮತ್ತು ಸ್ಥಳ** | **31.12.2022ಬೆಳಿಗ್ಗೆ 11.30**<br>ಸ್ಥಳ : ಶಿವಮೊಗ್ಗ ಹಾಲು ಒಕ್ಕೂಟ, ಮಾಚೇನಹಳ್ಳಿ ನಿದಿಗೆ (ಅಂಚೆ) 577 222– ಶಿವಮೊಗ್ಗ |
| 4 | **ಭರ್ತಿ ಮಾಡಿದ ಟೆಕ್ನಿಕಲ್ ಟೆಂಡರ್ ತೆರೆಯುವ** | 20.01.2023 ರಂದು ಬೆಳಿಗ್ಗೆ: 11.30 ಗಂಟೆಗೆ |
| 5 | **ಭರ್ತಿ ಮಾಡಿದ ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ** | 21.01.2023 ರಂದು ಮಧ್ಯಾಹ್ನ: 12.30 ಗಂಟೆಗೆ |

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

**ವಿಶೇಷ ಸೂಚನೆ :**

1) ಟೆಂಡರ್‌ನಲ್ಲಿ ಪ್ರಕಟಿಸಿದ ಮಾದರಿಯ/ಸಾಮರ್ಥ್ಯದ ಕನಿಷ್ಠ ಹತ್ತು ವಾಹನವುಳ್ಳವರು ಮಾತ್ರ ಟೆಂಡರ್ ಅರ್ಜಿ ಜೊತೆಯಲ್ಲಿ ವಾಹನವಾರು ದಾಖಲಾತಿಗಳನ್ನು ಲಗತ್ತಿಸಿರಬೇಕು.

2) ಟೆಂಡರ್‌ನಲ್ಲಿ ಸೂಚಿಸಿರುವ ಮಾರ್ಗಕ್ಕೆ ಪಶುಆಹಾರವನ್ನು ಸಾಗಾಣಿಕೆ ಮಾಡಲು ಸುಸ್ಥಿತಿಯಲ್ಲಿರುವ ಸರಕು ಸಾಗಿಸುವ ಅಂದಾಜು 20 ಮೆ.ಟನ್ ಸಾಮರ್ಥ್ಯವುಳ್ಳ 2008 ರ ಅಥವಾ ನಂತರದ ಮಾದರಿಯ ಟಾರ್ಪಲ್ ಮುಚ್ಚಿದ ಬಾಡಿ/ಟಾರ್ಪಾಲ್ ಹೊದಿಕೆ ಅಳವಡಿಸಲು ಅನುಕೂಲವಾಗುವಂತಹ ವಾಹನಗಳು ಇರಬೇಕು. ಸರಕು ಸಾಗಾಣಿಕಾ ಸಂದರ್ಭದಲ್ಲಿ ಟಾರ್ಪಲ್ ಮುಚ್ಚಳಿಕೆ ಕಡ್ಡಾಯವಾಗಿವಾಗಿರುತ್ತದೆ.

3) ಟೆಂಡರ್ ಕರೆಯಲಾಗಿರುವ ಮಾರ್ಗಕ್ಕೆ ನಿಗದಿಪಡಿಸಿದ ವಾಹನಕ್ಕಿಂತ ಒಕ್ಕೂಟದಿಂದ ಸೂಚಿಸಿದ ಮೇರೆಗೆ ಹೆಚ್ಚುವರಿಯಾಗಿ ವಾಹನ ಒದಗಿಸಲು ಬದ್ಧರಾಗಿರಬೇಕು.

4) ಕಹಮದಿಂದ ಒಕ್ಕೂಟಕ್ಕೆ ಪಶುಆಹಾರ ಘಟಕವಾರು ಹಂಚಿಕೆ ಮಾಡಲಾದ ಪಶುಆಹಾರವನ್ನು ದಿನವಹಿ ನಿಗದಿಪಡಿಸಿದ ಗುರಿಯಾಂತೆ ಎತ್ತುವಳಿ ಮಾಡಿ ಸರಬರಾಜು ಮಾಡಲು ಬದ್ಧರಾಗಿರಬೇಕು.

5) ಗುತ್ತಿಗೆ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಓಡಿಸಿದ ಕನಿಷ್ಟ ಮೂರು ತಿಂಗಳ ನಂತರ ನಿಯಾಮಾನುಸಾರ ವರ್ಗಾವಣೆ ಶುಲ್ಕ ರೂ. 10,000/- ಪಾವತಿಸಿದಲ್ಲಿ ಒಂದು ಬಾರಿ ಮಾತ್ರ ಮಾಡಲಾಗುವುದು.

6) ಸದರಿ ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರ್‌ದಾರರು ಹಾಗೂ ಹಾಲಿ ಇರುವ ಗುತ್ತಿಗೆದಾರರು ಇನ್ನೂ ಟೆಂಡರ್ ಅವಧಿ ಮುಗಿಯದೇ ಇರುವ ಪಶುಆಹಾರ ಸಾಗಾಣಿಕೆ ಮಾರ್ಗಗಳಿಗೆ ನೀಡಿರುವ ವಾಹನ ದಾಖಲಾತಿಗಳನ್ನು ಈ ಟೆಂಡರಿಗೆ ಸಲ್ಲಿಸಬಹುದಾಗಿದೆ.

7) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಕಹಾಮದಿಂದ ಕಾಲಕಾಲಕ್ಕೆ ಪಶುಆಹಾರ ಪರಿಮಾಣವನ್ನು ಹಂಚಿಕೆ ಮಾಡುವ ಶಿಕಾರಿಪುರ ಪಶುಆಹಾರ ಕಾರ್ಖಾನೆಯಲ್ಲಿ ಉತ್ಪಾದನೆಯಾಗುವ ಪರಿಮಾಣದಲ್ಲಿ ವ್ಯತ್ಯಾಸವಾಗಬಹುದು. ಆದ್ದರಿಂದ ಮಾಸಿಕ ಪಶುಆಹಾರ ಸಾಗಾಣಿಕಾ ಪರಿಮಾಣವೂ ಸಹ ವ್ಯತ್ಯಾಸವಾಗುವುದು. ಇದಕ್ಕೆ ಬದ್ಧರಾದ ಸಾಗಾಣಿಕೆ ಗುತ್ತಿಗೆದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದು.

8) ಪಶುಆಹಾರ ಸಾಗಾಣಿಕೆ ಮಾರ್ಗಕ್ಕೆ ಎರಡು ವರ್ಷಗಳ ಅವಧಿಗೆ ವಾಹನ ಒದಗಿಸಲು ಟೆಂಡರ್ ಕರೆಯಲಾಗಿದೆ.

ಈ ಮೇಲೆ ತಿಳಿಸಿರುವಂತೆ ಟೆಂಡರ್ ಒಪ್ಪಿಗೆಯಾದಲ್ಲಿ ನಿಗದಿತ ಮಾರ್ಗದ ಮುಂದೆ ಸೂಚಿಸಿದ ಭದ್ರತಾ ಠೇವಣಿ ನೀಡಲು ಒಪ್ಪಿರುತ್ತೇನೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

**ನಿಬಂಧನೆ ಮತ್ತು ಷರತ್ತುಗಳು**

1. ಅಂದಾಜು 20 ಮೆ.ಟನ್ ಸಾಮರ್ಥ್ಯದ ಕನಿಷ್ಠ 10 ಸರಕು ಸಾಗಾಣಿಕೆ ಸಾರಿಗೆ ವಾಹನಗಳನ್ನು ಕಡ್ಡಾಯವಾಗಿ ಹೊಂದಿರುವ ವಾಹನ ಮಾಲೀಕರು ಟೆಂಡರ್ ಸಲ್ಲಿಸಬಹುದಾಗಿದೆ. ಮತ್ತು ಇ-ಪ್ರೋಕ್ಯೂರ್‌ಮೆಂಟ್ ನಿಯಾಮಾವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಟೆಂಡರ್ ಅರ್ಜಿ ಸಲ್ಲಿಸಬಹುದು.
2. ರೂ.2,50,000/- ಇ.ಎಂ.ಡಿ ಪಾವತಿಸಿ ಟೆಂಡರ್‌ನಲ್ಲಿ ಸೂಚಿಸಿರುವ ಕ್ರ.ಸಂ 1 ಕ್ಕೆ ಶಿಕಾರಿಪುರದಿಂದ ನಿಗದಿಪಡಿಸಿದ ವಿಭಾಗದ ಪಶುಆಹಾರ ಸಾಗಾಣಿಕೆ ಮಾರ್ಗಕ್ಕೆ ಟೆಂಡರ್ ಸಲ್ಲಿಸಬಹುದು.
3. ಪಶುಆಹಾರ ಸಾಗಾಣಿಕೆ ಮಾರ್ಗಕ್ಕೆ 2008 ರ ಅಥವಾ ನಂತರದ ಮಾಡಲ್ ಆಗಿರಬೇಕು. ವಾಹನವು ಸುಸ್ಥಿತಿಯಲ್ಲಿದ್ದು, ವಾಹನಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಚೆಕ್ ಲಿಸ್ಟ್‌ನಲ್ಲಿ ಕ್ರಮಬದ್ಧವಾಗಿ ಬರೆದು (ಆರ್.ಸಿ.ಬುಕ್, ಎಫ್.ಸಿ, ಪರಮಿಟ್, ಇನ್ಸೂರೆನ್ಸ್, ಟ್ಯಾಕ್ಸ್ ಕಾರ್ಡ್ ಎಮಿಷನ್ ಟೆಸ್ಟ್, ಮುಂತಾದವುಗಳು.)ಟೆಂಡರ್‌ದಾಖಲಾತಿಗಳೊಂದಿಗೆ ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು.
4. ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ಅಂದಾಜು 20 ಟನ್ ಸಾಮರ್ಥ್ಯದ ಕನಿಷ್ಠ 10 ಸುಸ್ಥಿತಿಯುಳ್ಳ ಸರಕು ಸಾಗಾಣಿಕೆ ವಾಹನಗಳನ್ನು ಹೊಂದಿರತಕ್ಕದ್ದು. ವಾಹನಗಳ ದಾಖಲಾತಿಗಳನ್ನು ಟೆಂಡರ್ ಪುಸ್ತಕದಲ್ಲಿರುವ ಚೆಕ್ ಲಿಸ್ಟ್‌ನ್ನು ಭರ್ತಿಮಾಡಿ ಅದರಂತೆ ಅಪ್ ಲೋಡ್ ಮಾಡತಕ್ಕದ್ದು. ವಾಹನ ದಾಖಲಾತಿಗಳನ್ನು ಅಪ್‌ಲೋಡ್ ಮಾಡದಿದ್ದಲ್ಲಿ ಮತ್ತು 10 ಕ್ಕಿಂತ ಕಡಿಮೆ ವಾಹನ ಹೊಂದಿರುವವರ ಟೆಂಡರ್‌ನ್ನು ತಿರಸ್ಕರಿಸಲಾಗುವುದು. ಅಪ್‌ಲೋಡ್ ಮಾಡಲಾದ ವಾಹನದ ದಾಖಲಾತಿಗಳನ್ನು ಆನ್‌ಲೈನ್ mParivahan app ನಲ್ಲಿ ಪರಿಶೀಲಿಸಲಾಗುವುದು.
5. ಒಕ್ಕೂಟದಲ್ಲಿ ಪಶುಆಹಾರ ಸಾಗಾಣಿಕೆ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಹಾಲಿ ನೀಡಿರುವ 2008 ರ ಅಥವಾ ನಂತರ ಸಾಲಿನ ಸುಸ್ಥಿತಿಯುಳ್ಳ ವಾಹನದ ದಾಖಲಾತಿಗಳನ್ನು ಸಹ ಅಪ್‌ಲೋಡ್ ಮಾಡಿ ಟೆಂಡರ್ ಅರ್ಜಿ ಸಲ್ಲಿಸಬಹುದು.
6. ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ಹಾ.ಉ.ಸಹಕಾರ ಸಂಘಗಳ ಬೇಡಿಕೆ ಅನುಸಾರ ಕಹಾಮದ ಶಿಕಾರಿಪುರ ಪಶುಆಹಾರ ಕಾರ್ಖಾನೆಯಲ್ಲಿನ ಉತ್ಪಾದನೆ ಮತ್ತು ಒಕ್ಕೂಟಕ್ಕೆ ಹಂಚಿಕೆಯಾಗುವ ಪಶುಆಹಾರದ ಪರಿಮಾಣದ ಮೇಲೆ ಅಂದಾಜನ್ನು ನಮೂದಿಸಿದ್ದು, ಪಶುಆಹಾರ ಸಾಗಾಣಿಕೆ ಪರಿಮಾಣವು ಟೆಂಡರ್‌ನಲ್ಲಿ ನಮೂದಿಸಿದ್ದಕ್ಕಿಂತ ಹೆಚ್ಚು/ಕಡಿಮೆ ಆಗಬಹುದಾಗಿದೆ.
7. ಕ್ರ.ಸಂ 1ರ ಮಾರ್ಗಕ್ಕೆ ಟೆಂಡರ್‌ನಲ್ಲಿ ಸಮ ದರ ನಮೂದಿಸಿರುವುದು ಕಂಡುಬಂದಲ್ಲಿ ಆಸಕ್ತ ಟೆಂಡರ್‌ದಾರರೊಂದಿಗೆ ಪುನಃ ದರ ಸಂಧಾನ ಮಾಡಿ, ದರ ಸಂಧಾನದಲ್ಲಿ ಕಡಿಮೆ ದರ ನಮೂದಿಸುವ ಟೆಂಡರ್‌ದಾರರಿಗೆ ಮಾತ್ರ ಪಶುಆಹಾರ ಸಾಗಾಣಿಕೆ ಟೆಂಡರ್ ನೀಡಲಾಗುವುದು.
8. ಕನಿಷ್ಠ ಇ.ಎಂ.ಡಿ. ರೂ. 2,50,000/- ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ-ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು. ಟೆಂಡರ್‌ದರ ಒಪ್ಪಿಗೆಯಾಗಿ ಕೆಲಸದ ಕಾರ್ಯಾದೇಶ ನೀಡುವ ಮುನ್ನ ಭದ್ರತಾ ಠೇವಣಿಯನ್ನು ಬ್ಯಾಂಕ್ ಜಂಟಿ ಎಫ್.ಡಿ. ಮೂಲಕ ಮಾತ್ರ ಕಚೇರಿಗೆ ನೀಡಬೇಕಾಗಿರುತ್ತದೆ.
9. ಪಶು ಆಹಾರ ಸಾಗಾಣಿಕೆ ಗುತ್ತಿಗೆದಾರರು, ಪಶುಆಹಾರ ಕಾರ್ಖಾನೆಯಿಂದ ಪಶುಆಹಾರ, ಖನಿಜ ಮಿಶ್ರಣ, ಯು.ಎಂ.ಬಿ, ಕರುಗಳ ಆಹಾರ, ಸಮೃದ್ಧಿ ಪಶುಆಹಾರ ಇತ್ಯಾಧಿಗಳನ್ನು ಪಡೆದು ಒಕ್ಕೂಟದಿಂದ ನೀಡಿದ ಸಂಘಗಳ ಬೇಡಿಕೆ ಮತ್ತು ವೇಳಾಪಟ್ಟಿಯಂತೆ ಸಂಬಂಧಿಸಿದ ಸಂಘಗಳಿಗೆ ವಿತರಿಸತಕ್ಕದ್ದು, **ಪಶುಆಹಾರವನ್ನು ಲಾರಿಗಳಿಗೆ ಏರಿಸುವ ಮತ್ತು ಸಂಘಗಳಲ್ಲಿ ಇಳಿಸುವ ವೆಚ್ಚ ಮತ್ತು ರಾಷ್ಟ್ರೀಯ/ರಾಜ್ಯ ಹೆದ್ದಾರಿ ಶುಲ್ಕಗಳನ್ನು ಸೇರಿಸಿ ದರ ನಮೂದಿಸುವುದು.**
10. **TDS ಆದಾಯ ತೆರಿಗೆ, ಜಿ.ಎಸ್.ಟಿ. (Reverse Charging Method) ಮತ್ತು ಅನ್ವಯಿಸುವ ಇತರೆ ತೆರಿಗೆಗಳನ್ನು ಗುತ್ತಿಗೆದಾರರ ಪಶುಆಹಾರ ಸಾಗಾಣಿಕೆ ಬಿಲ್ಲಿನಲ್ಲಿ ನಿಯಮಾವಳಿಯಂತೆ ಕಠಾಯಿಸಲಾಗುವುದು.**

ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ ವಿಭಾಗವನ್ನು ಸಂಪರ್ಕಿಸಬಹುದು.

ಸಹಿ/-

**ದಿನಾಂಕ: 15.12.2022** | **ವ್ಯವಸ್ಥಾಪಕ ನಿರ್ದೇಶಕರು**

ಸ್ಥಳ: ಶಿವಮೊಗ್ಗ | ಶಿವಮೊಗ್ಗ ದಾವಣಗೆರೆ ಮತ್ತು ಚಿತ್ರದುರ್ಗ

ಜಿಲ್ಲಾ | ಸಹಕಾರ ಹಾಲು ಒಕ್ಕೂಟ